# ಸೆರೆವಾಸಿಗಳ ಕುಟುಂಬದ ಅಳಲು ನೆರವಿಗೆ ಸಹಾನುಭೂತಿಯ ಬಿಳಲು

**ನಮಗೆ ಸರಳುಗಳ ಹಿಂದಿನ ಕೈದಿಗಳ ಸಂಕಷ್ಟಗಳು ಸಾಹಿತ್ಯ–ಸಿನಿಮಾಗಳ ಮೂಲಕ ಸ್ವಲ್ಪಮಟ್ಟಿಗೆ ಪರಿಚಿತ. ಜೈಲುಪಾಲಾದ ವ್ಯಕ್ತಿಯ ಕುಟುಂಬದ ತುಮುಲ ಅಷ್ಟೇನೂ ಪರಿಚಿತವಲ್ಲ. ಆ ತವಕ ತಲ್ಲಣಗಳಿಗೆ ದನಿಯಾಗುವ ಪ್ರಯತ್ನ ಮಾಡುತ್ತಿದೆ, ‘ನ್ಯಾಯಕ್ಕಾಗಿ ಸೆರೆವಾಸಿ ಕುಟುಂಬಸ್ಥರ ಸಂಘ’.**

**■ ಸುಬ್ರಮಣ್ಯ ಎಚ್.ಎಂ.**



ನ್ಯಾಯಕ್ಕಾಗಿ ಸೆರೆವಾಸಿ ಕುಟುಂಬಸ್ಥರ ಸಂಘದಿಂದ ನಡೆದ ಬೀದಿ ನಾಟಕ



**ಘಟನೆ 1**

‘ಆ ದಿನ ರಾತ್ರಿ ಹೂವು ಪೋಣಿಸಿ ಮಲಗೋ ಹೊತ್ತಿಗೆ ಮಧ್ಯರಾತ್ರಿ. ದೇಹ ದಣಿದು ಆಗ ತಾನೇ ಕಣ್ಣಿಗೆ ನಿದ್ದೆ ಹತ್ತಿತ್ತು. ನಡು ರಾತ್ರಿಯಲ್ಲಿ ಪೊಲೀಸರು ಬಾಗಿಲು ಬಡಿದರು. ಗಾಬರಿ ಆಯ್ತು. ಮಲಗಿದ್ದ ಮಗನ ಕೊರಳಪಟ್ಟಿ ಹಿಡಿದು ಪೊಲೀಸ್ ಜೀಪಿನಲ್ಲಿ ಕರೆದೊಯ್ದರು. ಯಾವುದೋ ಸಣ್ಣ ತಪ್ಪಿಗೆ ಒಂದ್ಸಲ ಜೈಲಿಗೆ ಹೋಗಿ ಬಂದಿದ್ದ ಮಗನನ್ನು ಮತ್ತೊಂದು ಕೇಸಿನಲ್ಲಿ ಸಿಕ್ಕಿಸಿದರು. ಈ ಸಲ ತಪ್ಪೇ ಮಾಡದ ಮಗ ಜೈಲು ಪಾಲಾದ. ಒಂಟಿ ಹೆಂಗಸು, ಹೂವು ಮಾರೋ ಬದ್ಕು ನಮ್ದು’.

‘24 ವರ್ಷದ ಮಗನಿಗೆ ವಿದ್ಯೆ ಹತ್ತಲಿಲ್ಲ. ಸಣ್ಣ ವ್ಯಾಪಾರ ಮಾಡೋ ಅವನ ಕನಸಿಗೆ ಕೊಳ್ಳಿ ಬಿದ್ದಿದೆ. ನಮ್ಮ ಬಡಾವಣೆಯಲ್ಲಿ ಎಲ್ಲೇ ಕಳ್ಳತನ, ಗಲಾಟೆ, ಕೊಲೆ ಸಂಚು, ಕೊಲೆ ನಡೆದರೂ ಸಂಬಂಧ ಕಲ್ಪಿಸಿ ಜೈಲಿಗೆ ಅಟ್ಟೋದು ಮಾಮೂಲಿ. ಪೊಲೀಸರು ಇದುವರೆಗೂ 14 ಸುಳ್ಳು ಕೇಸು ದಾಖಲಿಸಿ ಅವನ ಬದ್ಕು ಮೂರಾಬಟ್ಟೆ ಮಾಡಿದ್ದಾರೆ. ದುಡಿಮೆಯೂ ಇಲ್ಲ, ಜೀವನವೂ ಇಲ್ಲದಂಗಾಗಿದೆ. ಹೂವು ಮಾರೋ ದುಡಿಮೆಯಲ್ಲೊಂದು ಪಾಲು ಹಣ ಪೊಲೀಸರ ಕಿಸೆ ಸೇರುತ್ತಿದೆ. ಬಡವರು ಬದುಕೋದಾದರೂ ಹೆಂಗೆ? ಬಡವರು ಅಂದ್ರೆ ಕ್ರಿಮಿನಲ್‌ಗಳಾ?’

ಹೂವಾಡಗಿತ್ತಿ ಬನ್ನೇರುಘಟ್ಟದ ಸೌಭಾಗ್ಯ (ಹೆಸರು ಬದಲು) ಪೊಲೀಸ್ ದೌರ್ಜನ್ಯ ವಿರುದ್ಧ ಕಿಡಿಕಾರುತ್ತಾ ಹನಿಗಣ್ಣಾದರು.

**ಘಟನೆ 2**

‘ಮಾರ್ಟ್‌ವೊಂದರ ಮಾರುಕಟ್ಟೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ 22 ವರ್ಷದ ಮಗ ಅಲ್ಲೇ ಸಣ್ಣ ಕೊಠಡಿಯೊಂದನ್ನು ಬಾಡಿಗೆ ಪಡೆದು ವಾಸವಾಗಿದ್ದ. ಆ ದಿನ ಅವನಿದ್ದ ರೂಂಗೆ ಅವನ ನಾಲ್ಕೈದು ಸ್ನೇಹಿತರು ಹೋಗಿದ್ದರು. ಗುಂಪಿನಲ್ಲಿದ್ದ ಸ್ನೇಹಿತನೊಬ್ಬ ಕುಖ್ಯಾತ ರೌಡಿಶೀಟರ್ ಕೊಲೆ ಪ್ರಕರಣದ ಆರೋಪಿಯಾಗಿದ್ದ. ಸಿಸಿಟಿವಿ ಕ್ಯಾಮೆರಾ ಆಧರಿಸಿ ಆರೋಪಿಗೆ ಬಲೆ ಬೀಸಿದಾಗ ಮಗನ ರೂಂಗೆ ಹೋಗಿ ಬಂದಿದ್ದ ಸುಳಿವು ಪೊಲೀಸರಿಗೆ ಸಿಕ್ತು. ಅವನ ಜತೆ ಇವನನ್ನೂ ಬಂಧಿಸಿದರು. ಏಳೋ, ಎಂಟನೇ ಆರೋಪಿ. ಕೊಲೆ ಕೇಸಿನಲ್ಲಿ ವಿಚಾರಣಾಧೀನ ಕೈದಿ ಈಗ. ತಪ್ಪೇ ಮಾಡದ ಮಗ ಜೈಲಿನಲ್ಲಿ ಇದ್ದಾನೆ. ನನಗೂ ಬೇರೆ ದಿಕ್ಕಿಲ್ಲ’.

ಇದು ಆಡುಗೋಡಿ ರೂಪಾಶ್ರೀ (ಹೆಸರು ಬದಲು) ಅಳಲು.

**ಘಟನೆ 3**

ಕೆ.ಆರ್. ಮಾರುಕಟ್ಟೆಯಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದ ಸುಂದರೇಶ್ (ಹೆಸರು ಬದಲು) ಅಮಾಯಕ ಯುವಕ. ಆಂಧ್ರಪ್ರದೇಶದ ಅನಂತಪುರಂನ ಸುಂದರೇಶ್ ತಂದೆ–ತಾಯಿ ಇಲ್ಲದ ತಬ್ಬಲಿ. ದಿನವಿಡೀ ಮೂಟೆ ಹೊರುವ ದಿನಗೂಲಿ. ಸಿಗೋ ಪುಡಿಗಾಸಿನಲ್ಲೇ ಹೊಟ್ಟೆ ತುಂಬಿಸಿಕೊಂಡು ಅಲ್ಲೇ ಮಲಗುತ್ತಿದ್ದ. ಆ ರಾತ್ರಿ ಮಲಗಿದ್ದ ಸುಂದರೇಶನನ್ನು ಪೊಲೀಸರು ಠಾಣೆಗೆ ಕರೆದೊಯ್ದರು. ಸರಗಳವು ಪ್ರಕರಣವೊಂದರಲ್ಲಿ ವಶಕ್ಕೆ ಪಡೆದು ನಂತರ ಕಳುಹಿಸಿಕೊಟ್ಟರು. ಇದಾದ ನಂತರ ಹಲ್ಲೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನಡುರಾತ್ರಿ ವಶಕ್ಕೆ ಪಡೆದರು. ಎರಡು ದಿನ ಠಾಣೆಯಲ್ಲಿರಿಸಿಕೊಂಡು ಕಳುಹಿಸಿದರು. ಮತ್ತೊಂದ್ಸಲ ಕೊಲೆ ಪ್ರಕರಣವೊಂದರಲ್ಲಿ ವಶಕ್ಕೆ